**<u>ಪತ್ರಿಕಾ ಹೇಳಿಕೆ</u>**

**ಪ್ರಾಕೃತಿಕ ಸಂಪತ್ತು ಸಂರಕ್ಷಣೆ ಅಭಿಯಾನ ಅಂಗವಾಗಿ**

## <u>ಕೃಷಿ ವಸ್ತು ಪ್ರದರ್ಶನ ಮತ್ತು ಕೃಷಿಕರ ಜಾಗೃತಿ ಸಮಾವೇಶ</u>

**ಸಹಭಾಗಿತ್ವ: ನೇತ್ರಾವತಿ ಕೃಷಿಕರ ಅಭಿವೃದ್ಧಿ ಸಂಘಗಳ ಒಕ್ಕೂಟ, ಬಂಟ್ವಾಳ**

**ಮತ್ತು**

**ದಿಶಾ ಟ್ರಸ್ಟ್(ರಿ) ಕೈಕಂಬ, ಮಂಗಳೂರು**

04.03.2021
ಬಂಟ್ವಾಳ

ಮಣ್ಣು, ನೀರು ಮತ್ತು ಜೈವಿಕ ಸೊತ್ತು ಅತ್ಯಮೂಲ್ಯ ನೈಸರ್ಗಿಕ ಸಂಪತ್ತುಗಳು. ಅವುಗಳ ಸಂರಕ್ಷಣೆ ಪ್ರತಿಯೊಬ್ಬ ನಾಗರೀಕನ ಕರ್ತವ್ಯ. ಯಾವ ದೇಶ ಮಣ್ಣು ಸಂರಕ್ಷಣೆಗೆ ಒತ್ತು ಕೊಡುವುದಿಲ್ಲವೋ ಆ ದೇಶಕ್ಕೆ ಭವಿಷ್ಯವಿಲ್ಲ ಎಂದು ತಜ್ಞರು ಹೇಳುತ್ತಾರೆ.

ಮಳೆಗಾಲದಲ್ಲಿ ನಮ್ಮ ಗ್ರಾಮದಿಂದ, ತಾಲೂಕಿನಿಂದ, ಜಿಲ್ಲೆಯಿಂದ ಪ್ರತೀವರ್ಷ ಕೋಟಿ ಟನ್ ಮಣ್ಣು ಮಳೆಯ ನೀರಿನಲ್ಲಿ ತೋಳೆದು ಸಮುದ್ರ ಸೇರುತ್ತದೆ. ಜೈವಿಕ ಸೊತ್ತು ಕೃಷಿತ್ಯಾಜ್ಯ–ಎಲೆ ಸೋಗೆ, ಬೈಹುಲ್ಲು ಸುಟ್ಟು ಬೂದಿ ಮಾಡಲಾಗುತ್ತದೆ. ಇದರಿಂದ ಮಣ್ಣಿಗೆ ಸೇರಬೇಕಾದ ಗೊಬ್ಬರ ಸೇರದೆ ಮಣ್ಣು ಫಲವತ್ತತೆ ಕಳೆದುಕೊಂಡು ಬರಡಾಗುತ್ತದೆ. ಇಳುವರಿ ಕಡಿಮೆಯಾಗುತ್ತದೆ. ಭೂಮಿ ಬಂಜರಾಗುತ್ತದೆ. ಊರು ಸೊರಗುತ್ತದೆ. ತತ್ಪರಿಣಾಮವಾಗಿ ಕೃಷಿಯನ್ನೇ ಜೀವನೋಪಾಯ ಮಾಡಿಕೊಂಡಿರುವ ಕೃಷಿಕರ ಬದುಕು ಮಸುಕಾಗುತ್ತದೆ.

ಮಳೆನೀರು ಇಂಗಿಸುವ ಮತ್ತು ಒಸರಿನ ನೀರನ್ನು ಸಂರಕ್ಷಿಸುವ ವ್ಯವಸ್ಥೆಗಳಿಲ್ಲದೆ ಬೇಸಿಗೆಯಲ್ಲಿ ಬೇಗನೆ ನದಿ–ತೊರೆ–ತೋಡುಗಳು ಒಣಗುತ್ತವೆ. ಇಂದಿನ ಬಹುದೊಡ್ಡ ಅಗತ್ಯತೆಯೆಂದರೆ, ಫಲವತ್ತಾದ ಮೇಲ್ಮಣ್ಣನ್ನು ಸಂರಕ್ಷಿಸುವುದು, ನೀರನ್ನು ಹಿಡಿದಿಟ್ಟುಕೊಳ್ಳುವುದು ಮತ್ತು ಎಲ್ಲಾ ಸಾವಯವ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುವುದು. ಇದು ಬಹಳ ತುರ್ತಾಗಿ ಮಾಡಬೇಕಾದ ಕೆಲಸವಾಗಿದೆ.

ಈ ವಿಷಯವನ್ನು ಬಂಟ್ವಾಳದ 20 ಗ್ರಾಮಗಳಾದ ಕರಿಯಂಗಳ, ಅಮ್ಮುಂಜೆ, ಬಡಗಬೆಳ್ಳೂರು,ತೆಂಕಬೆಳ್ಳೂರು, ಅಮ್ಟಾಡಿ, ಕುರಿಯಾಳ, ರಾಯಿ, ಕೊಯ್ಲ, ಅರಳ, ಸಂಘಬೆಟ್ಟು, ಕರ್ಪೆ, ಕುಕ್ಕಿಪಾಡಿ, ಎಲ್ಯನಡುಗೋಡು, ಚೆನ್ನೈತ್ತೋಡಿ, ಅಜ್ಜಿಬೆಟ್ಟು,ಕೊಡಂಬೆಟ್ಟು, ಪಿಲಿಮೊಗರು, ಪಂಜಿಕಲ್ಲು, ಮೂಡನಡುಗೊಡು ಮತ್ತು ಬುಡೋಳಿಯ ರೈತರಲ್ಲಿ ಪ್ರಸ್ತಾವಿಸಿದಾಗ ಸುಮಾರು 2000 ಸಣ್ಣ ಮತ್ತು ಅತೀ ಸಣ್ಣ ರೈತರು ಮುಂದೆ ಬಂದು ತಮ್ಮ ಗ್ರಾಮಗಳಲ್ಲಿ ರೈತರ ಅಭಿವೃದ್ಧಿ ಸಂಘಗಳನ್ನು ರಚಿಸಿಕೊಂಡು ನೇತ್ರಾವತಿ ಕೃಷಿಕರ ಅಭಿವೃದ್ಧಿ ಸಂಘಗಳ ಒಕ್ಕೂಟ ಬಂಟ್ವಾಳ ಇದರಡಿಯಲ್ಲಿ ಸಂಘಟಿತರಾಗಿ ರೈತಾಪಿ ಜನರ ಬದುಕನ್ನು ಹಸನು ಮಾಡುವ ಪಣತೊಟ್ಟುಕೊಂಡು ಮಣ್ಣು, ನೀರು ಮತ್ತು ಜೈವಿಕ ಸೊತ್ತು ಸಂರಕ್ಷಣೆಯಲ್ಲಿ ಕಾರ್ಯನಿರತರಾಗಿದ್ದಾರೆ.

ಹೊಳೆಬದಿಯಲ್ಲಿ ಕಟ್ಟಪುಣಿ ರಚನೆ (22), ಕಿಂಡಿ ಅಣೆಕಟ್ಟು ರಚನೆ (6), ಕಿಂಡಿ ಅಣೆಕಟ್ಟು ರಚನೆ (6), ಕೊರಕಲು ತಡೆಗಳ ನಿರ್ಮಾಣ (23), ಇಂಗು ಗುಂಡಿಗಳು (2977) , ಹಣ್ಣು ಹಂಪಲಿನ ಗಿಡಗಳ ನಾಟಿ (8140), ಕೃಷಿ ಹೊಂಡಗಳ ರಚನೆ (3), ಕುಡಿಯುವ ನೀರಿನ ಮತ್ತು ಕೃಷಿ ಬಳಕೆಯ ಬಾವಿ ಪುನರ್ ನಿರ್ಮಾಣ (111), ಕೈ ತೋಟಗಳು (160), ಎರೆಹುಳಗೊಬ್ಬರ ಘಟಕಗಳು (52) ಹಾಗೂ ಗೋಬರ್ ಗ್ಯಾಸ್ ಘಟಕ(41) ಗಳನ್ನು ರಚಿಸಿಕೊಂಡು ತಮ್ಮ ಜೀವಾನೋಪಾಯದ ಅಭಿವೃದ್ಧಿಗೆ ಶ್ರಮಿಸುತಿದ್ದಾರೆ.

ಮೇಲಿನ ರಚನೆಗಳನ್ನು ಕೃಷಿಕರು ದಿಶಾ ಟ್ರಸ್ಟ್‌ನ ಮಾರ್ಗದರ್ಶನದಲ್ಲಿ ತಮ್ಮ ಕೃಷಿ ಭೂಮಿಯಲ್ಲಿ ಮಣ್ಣು, ನೀರು ಮತ್ತು ಜೈವಿಕ ಸೊತ್ತು ಸಂರಕ್ಷಣೆಗೆ ಸೂಕ್ತ ರಚನೆಗಳನ್ನು ಮಾಡಿಕೊಂಡು ತಮ್ಮ ಕೈಲಾಗುವಷ್ಟು ಕೊಡುಗೆಯನ್ನು ನೀಡುತ್ತಿದ್ದಾರೆ. ಇವುಗಳ ಸಂರಕ್ಷಣೆ ಮೂಲಕ ಮತ್ತು ಸದ್ಬಳಕೆ ಮಾಡಿ ತಮ್ಮ ಕೃಷಿ ಉತ್ಪಾದನೆಯನ್ನು ಸಹ ಹೆಚ್ಚಿಸಬಹುದೆಂದು ತೋರಿಸಿಕೊಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಕೃಷಿಕರೂ ನೆಲ, ಜಲ ಸಂರಕ್ಷಣೆ ಮೂಲಕ ಕೃಷಿ ಅಭಿವೃದ್ಧಿಯಿಂದ ತಮ್ಮ ಬದುಕನ್ನು ಹಸನು ಮಾಡಬೇಕೆಂಬ ಗುರಿಯನ್ನಿಟ್ಟುಕೊಂಡು ಬಂಟ್ವಾಳದ ನೇತ್ರಾವತಿ ಕೃಷಿಕರ ಅಭಿವೃದ್ಧಿ ಸಂಘಗಳ ಒಕ್ಕೂಟವು ಮಂಗಳೂರಿನ ದಿಶಾ ಟ್ರಸ್ಟ್‌ನ ಸಹಭಾಗಿತ್ವದಲ್ಲಿ **ದಿನಾಂಕ 21-03-2021 ಆದಿತ್ಯವಾರದಂದು ಬೆಳಿಗ್ಗೆ 10:00 ಗಂಟೆಯಿಂದ 5:00 ಗಂಟೆ ತನಕ ಬಂಟ್ವಾಳ ತಾಲೂಕಿನ ಪಂಜಿಕಲ್ಲು ಬಾಲೇಶ್ವರ ಶ್ರೀ.ಕೊಡಮಣಿತ್ತಾಯ ಬ್ರಹ್ಮ ಬೈದರ್ಕಳ ಗರಡಿ ವಠಾರದಲ್ಲಿ** ಕೃಷಿ ವಸ್ತು ಪ್ರದರ್ಶನ ಮತ್ತು ಕೃಷಿಕರ ಜಾಗೃತಿ ಸಮಾವೇಶವನ್ನು ಆಯೋಜಿಸಿದೆ. ಈ ಸಂದರ್ಭದಲ್ಲಿ ಕೃಷಿಕ್ಷೇತ್ರದಲ್ಲಿ ಸಾಧನೆ ಮಾಡಿದ ಕೃಷಿಕರೊಂದಿಗೆ ಚರ್ಚೆ, ವಿಚಾರಗೋಷ್ಠಿ ,ಉಪನ್ಯಾಸ, ಜಲ,ನೆಲ ಹಾಗೂ ಜೈವಿಕ ವಸ್ತು ಸಂರಕ್ಷಣೆಯ ಕುರಿತು ವಸ್ತು ಪ್ರದರ್ಶನಗಳನ್ನು ಸಂಘಟಿಸಲಾಗಿದೆ. ಸುಮಾರು 2000 ಮಂದಿ ಈ ಸಮಾವೇಶದಲ್ಲಿ ಪಾಲ್ಗೊಳ್ಳುವ ನೀರಿಕ್ಷೆ ಇಟ್ಟುಕೊಳ್ಳಲಾಗಿದೆ.

ಅತಿಥಿ ಆಭ್ಯಾಗತರ ವಿವರಗಳನ್ನು ಲಗತ್ತಿಸಿದ ಆಮಂತ್ರಣ ಪತ್ರದಲ್ಲಿ ನೀಡಲಾಗಿದೆ.

ನೆಲ-ಜಲ ಹಾಗೂ ಜೈವಿಕ ಸೊತ್ತು ಸಂರಕ್ಷಣೆ ಈಗಿನ ತುರ್ತಿನ ಅಗತ್ಯವಾಗಿರುವುದರಿಂದ ಸರ್ವರೂ ಈ ಪ್ರಾಕೃತಿಕ ಸಂಪನ್ಮೂಲಗಳ ಅಭಿಯಾನದಲ್ಲಿ ಕೈಜೋಡಿಸಬೇಕೆಂದು ವಿನಂತಿಸುತ್ತೇವೆ.

**ಶ್ರೀ.ಹರ್ಷೇಂದ್ರ ಹೆಗ್ಗಡೆ**
ಅಧ್ಯಕ್ಷರು
ನೇತ್ರಾವತಿ ಕೃಷಿಕರ ಅಭಿವೃದ್ಧಿ ಸಂಘಗಳ ಒಕ್ಕೂಟ, ಬಂಟ್ವಾಳ

**ಡಾ. ಐರಿನ್ ವೇಗಸ್**
ಅಧ್ಯಕ್ಷರು
ದಿಶಾ ಟ್ರಸ್ಟ್(ರಿ) ಕೈಕಂಬ, ಮಂಗಳೂರು